ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 21–11–2020

# ಮಾಧ್ಯಮ ಆಮಂತ್ರಣ

1. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಗಣನೀಯ ಸಾಧನೆ ಮಾಡಿದ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ :

ಪದಕ ಪ್ರದಾನ :
ಬಿ. ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ : 23–11–2020, ಸೋಮವಾರ, ಸಮಯ : ಬೆಳಿಗ್ಗೆ 11–00 ಗಂಟೆಗೆ
ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು

2. ವಿಧಾನಸಭೆಯ ನೂತನವಾಗಿ ಆಯ್ಕೆಯಾದ ಶಾಸಕರ ಪ್ರಮಾಣವಚನ ಸಮಾರಂಭ

ಮುನಿರತ್ನ – ಶಾಸಕರು, ರಾಜರಾಜೇಶ್ವರಿ ನಗರ
ಡಾ.ಸಿ.ಎಮ್.ರಾಜೇಶ್ ಗೌಡ – ಸಿರಾ

ದಿನಾಂಕ : 23–11–2020, ಸೋಮವಾರ, ಸಮಯ : ಬೆಳಿಗ್ಗೆ 11–00 ಗಂಟೆಗೆ
ಸ್ಥಳ :ಸಮ್ಮೇಳನ ಸಭಾಂಗಣ, ಮೂರನೇ ಮಹಡಿ, ವಿಧಾನ ಸೌಧ, ಬೆಂಗಳೂರು

# ಪತ್ರಿಕಾ ಪ್ರಕಟಣೆ

**ಹೆಸರುಘಟ್ಟ ಮೀನುಮರಿ ಉತ್ಪಾದನಾ ಕೇಂದ್ರದಲ್ಲಿ**

**ಮಾದರಿ ಸುಸಜ್ಜಿತ ಕ್ವಾರಂಟೈನ್ ಘಟಕ ಶೀಘ್ರದಲ್ಲಿಯೇ ಪ್ರಾರಂಭ–ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ**

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ): ರಾಜ್ಯದ 23 ಜಿಲ್ಲೆಗಳ ಕ್ರಿಯಾ ಯೋಜನೆಗಳು ಅನುಷ್ಠಾನದ ಹಂತದಲ್ಲಿದೆ. ಅಲಂಕಾರಿಕಾ ಮೀನು ಉತ್ಪಾದನೆ ಹಾಗೂ ಮಾರಾಟ ಚಟುವಟಿಕೆಯು ಇತ್ತೀಚೆಗೆ ಪ್ರವರ್ಧಮಾನಕ್ಕೆ ಬರುತ್ತಿದೆ. ಈ ಕ್ಷೇತ್ರದಲ್ಲಿ ವ್ಯವಹಾರಿಕಾ ಶಿಸ್ತು ಹಾಗೂ ರಫ್ತು ವೈವಾಟು ಉದ್ದೇಶದಿಂದ ಶೀಘ್ರದಲ್ಲಿಯೆ ಬೆಂಗಳೂರು ಸಮೀಪದ ಹೆಸರುಘಟ್ಟ ಮೀನುಮರಿ ಉತ್ಪಾದನಾ ಕೇಂದ್ರದಲ್ಲಿ ಒಂದು ಮಾದರಿ ಸುಸಜ್ಜಿತ ಕ್ವಾರಂಟೈನ್ ಘಟಕವನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಅವರು ಇಂದು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಮೀನುಗಾರಿಕೆ ಇಲಾಖೆ ಹಮ್ಮಿಕೊಂಡಿದ್ದ ವಿಶ್ವ ಮೀನುಗಾರಿಕೆ ದಿನಾಚರಣೆ ಹಾಗೂ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಯೊಂದಿಗೆ ಮೀನುಗಾರರ ಸುರಕ್ಷತೆ ಮತ್ತು ಆದಾಯ ಹೆಚ್ಚಳ ಮಾಡುವ ಉದ್ದೇಶವನ್ನು ಸರ್ಕಾರವು ಹೊಂದಿದ್ದು, 23 ಸಾವಿರ ಮೀನುಗಾರರ 60 ಕೋಟಿ ಸಾಲ ಮನ್ನಾ ಮಾಡಲಾಗಿದೆ ಎಂದರು.

ಕರ್ನಾಟಕ ರಾಜ್ಯ 320 ಕಿ.ಮೀ ಕರಾವಳಿ ಪ್ರದೇಶ ಹಾಗೂ 8 ಸಾವಿರ ಹೆಕ್ಟೇರ್‌ಗಳಿಗೂ ಹೆಚ್ಚು ಹಿನ್ನೀರು ಪ್ರದೇಶವನ್ನು ಹೊಂದಿದ್ದು, ಶ್ರಮಜೀವಿಗಳಾದ ಮೀನುಗಾರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಸರ್ಕಾರವು ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ ಎಂದರು.

2020–21ನೇ ಸಾಲಿನ ಆಯವ್ಯಯದಲ್ಲಿ ಮೀನುಗಾರಿಕಾ ಅಭಿವೃದ್ಧಿಗಾಗಿ 251.57 ಕೋಟಿ ಒದಗಿಸಿ, ಈ ಪೈಕಿ ಕೇಂದ್ರ ಪುರಸ್ಕೃತ ಯೋಜನೆಗೆ ಒಟ್ಟು 200 ಕೋಟಿ ವೆಚ್ಚದಲ್ಲಿ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿದೆ. ಕರಾವಳಿ ಯಾಂತ್ರೀಕೃತ ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಪ್ರತಿ ವರ್ಷ ಸುಮಾರು 135 ಕೋಟಿ ರೂ.ಗಳನ್ನು ಮೀನುಗಾರಿಕೆಗೆ ದೋಣಿಗರು ಬಳಸುವ ಡೀಜಲ್‌ಗಾಗಿ ಸಹಾಯಧನವನ್ನಾಗಿ ನೀಡಲಾಗುತ್ತಿದೆ.

ಪ್ರಧಾನ ಮಂತ್ರಿಗಳು ಘೋಷಿಸಿರುವ ಮತ್ಸ್ಯ ಸಂಪದ ಯೋಜನೆಯಡಿ ಪ್ರಸ್ತುತ ರಾಜ್ಯದ 137.199 ಕೋಟಿ ರೂ.ಗಳ ಕ್ರಿಯಾಯೋಜನೆಗೆ ಅನುಮೋದನೆಯಾಗಿದೆ. ಕೇಂದ್ರದ ಪಾಲಿನ ಮೊದಲನೆ ಕಂತಿನ ಅನುದಾನ 21.02 ಕೋಟಿ ಬಿಡುಗಡೆ ಆಗಿದೆ.

ಈ ದಿನಾಚರಣೆಯಂದು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯ ಸಮರ್ಪಕ ಅನುಷ್ಠಾನ ಕುರಿತು ಇಲಾಖೆಯ ಅಧಿಕಾರಿಗಳಿಗೆ ಹಾಗೂ ಮೀನುಗಾರರಿಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು, ಇದರ ಪ್ರಯೋಜನ ಮೀನುಗಾರಿಕೆ ಕ್ಷೇತ್ರದ ಪ್ರತಿಯೊಬ್ಬರಿಗೂ ತಲುಪಬೇಕು ಎಂದರು.

ಇದೇ ಸಂದರ್ಭದಲ್ಲಿ ದೋಣಿ ಅವಘಡದಲ್ಲಿ ಮೃತರಾದ ಏಳು ಜನ ಮೃತರ ಅವಲಂಬಿತರಿಗೆ ರೂ.10 ಲಕ್ಷಗಳ ಹೆಚ್ಚುವರಿ ಪರಿಹಾರ ವಿತರಿಸಿದರು. ಪ್ರಧಾನ ಮಂತ್ರಿ ಮತ್ಸ್ಯಸಂಪದ ಕೈಪಿಡಿ, ಇಲಾಖಾ ಯೋಜನೆಗಳ ಕೈಪಿಡಿ, ಮತ್ಸ್ಯಸಿರಿ ಖಾದ್ಯಗಳ ಬಿಡುಗಡೆ ಮಾಡಿ, ಮೀನುಗಾರಿಕೆ ಕ್ಷೇತ್ರದ ಸಾಧಕರನ್ನು ಅಭಿನಂದಿಸಿದರು.

ಪ್ರಾಸ್ತಾವಿಕ ಮಾತನಾಡಿದ ಮೀನುಗಾರಿಕೆ, ಬಂದರು, ಮುಜರಾಯಿ, ಒಳನಾಡು ಹಾಗೂ ಜಲಸಾರಿಗೆ ಸಚಿವರಾದ ಕೋಟ ಶ್ರೀನವಾಸ ಪೂಜಾರಿ ಮತ್ಸ್ಯ ಸಂಪದ ಯೋಜನೆಯು ಐದು ವರ್ಷಗಳ ಅವಧಿಯಾಗಿದ್ದು, ಮೀನುಗಾರರನ್ನು ಬಡತನ ರೇಖೆಗಿಂತ ಮೇಲೆ ತರಲು ಹಲವು ಯೋಜನೆಗಳನ್ನು ರೂಪಿಸಲಾಗಿದೆ ಎಂದರು.

ಸಮಾರಂಭದಲ್ಲಿ ಕಂದಾಯ ಸಚಿವ ಆರ್.ಅಶೋಕ್, ಉಡುಪಿ ಶಾಸಕ ರಘುಪತಿ ಭಟ್, ಮಾಜಿ ಸಚಿವ ಕುಮಾರ ಬಂಗಾರಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಉಪಸ್ಥಿತರಿದ್ದರು. ಮೀನುಗಾರಿಕೆ ನಿರ್ದೇಶಕ ರಾಮಾಚಾರ್ಯ ಸ್ವಾಗತಿಸಿದರು.

## ಪ್ರಥಮ ವರ್ಷದ ಡಿ. ಫಾರ್ಮ್ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ):

ಬೆಂಗಳೂರಿನ ಸುಬ್ಬಯ್ಯ ವೃತ್ತದಲ್ಲಿರುವ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ಮತ್ತು ಕರ್ನಾಟಕದ ಖಾಸಗಿ ಫಾರ್ಮಸಿ ಕಾಲೇಜ್‌ಗಳಲ್ಲಿರುವ ಸರ್ಕಾರಿ ಕೋಟಾದ ಪ್ರಥಮ ವರ್ಷದ ಡಿ.ಫಾರ್ಮ್ ಕೋರ್ಸಿಗೆ (2020–21 ನೇ ಸಾಲಿಗೆ) ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಪರೀಕ್ಷಾ ಪ್ರಾಧಿಕಾರ ಮಂಡಳಿ(ಡಿ. ಫಾರ್ಮ್) ವೆಬ್‌ಸೈಟ್ **http://www.beadpharmacy.org** ಮೂಲಕವೇ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ದಿನಾಂಕ 01–12–2020 ಮಧ್ಯರಾತ್ರಿ 12–00 ಗಂಟೆವರೆಗೆ. ನೇರ ಅಥವಾ ಅಂಚೆ ಮೂಲಕ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಯನ್ನು ದೂರವಾಣಿ ಸಂಖ್ಯೆ 080–22222681 email principal.gcp123@gmail.com ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

# Application invited

**Bengaluru, November 21 (Karnataka Information)**

**Online applications are invited from the eligible candidate and for admission to Diploma in Pharmacy (First year D. Pharm) course at Government college of Pharmacy, P. Kalingarao Road, Subbaiah Circle, Bengaluru-27 and Government quota seats in Private Pharmacy colleges of Karnataka. Date of Online application received 01-12-2020 till 12-00 midnight. (No hard copy is entertained) the candidates' can login to the website: http://www.beadpharmacy.org for further information. For further information can be contact 080-22222681 email principal.gcp123@gmail.com says official press release.**

## ವಸತಿ ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ):

ವಸತಿ ಸಚಿವ ವಿ. ಸೋಮಣ್ಣ ಅವರು ನವೆಂಬರ್ 24 ರಂದು ರಾಮನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪ್ರಾಥಮಿಕ & ಪ್ರೌಢಶಿಕ್ಷಣ ಸಚಿವರ ಪ್ರವಾಸ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ):

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವ ಎಸ್.ಸುರೇಶ್ ಕುಮಾರ್ ಅವರು ನವೆಂಬರ್ 24 ರಿಂದ 26ರ ವರೆಗೆಜೊಟ್ಟು 3 ದಿನಗಳ ಕಾಲ ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು

ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು 26 ರಂದು ಸಂಜೆ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಔಷಧಿ ಸಸ್ಯಗಳು ಭೂಮಿಯ ಸಂಪತ್ತು

**ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ):**

ಅಳಿವಿನಂಚಿನಲ್ಲಿರುವ ಔಷಧಿ ಸಸ್ಯಗಳನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಮುಂದಿನ ಪೀಳಿಗೆಗಾಗಿ ಅವುಗಳನ್ನು ರಕ್ಷಿಸಬೇಕಾದ ಅಗತ್ಯವಿದ್ದು ಪ್ರಕೃತಿ ನೀಡಿರುವ ಸಂಪತ್ತು ಔಷಧಿ ಸಸ್ಯಗಳು ಎಂದು ಕರ್ನಾಟಕ ಜೀವ ವೈವಿದ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅವರು ತಿಳಿಸಿದರು.

ಇಂದು ನಗರದ ಮಲ್ಲೇಶ್ವರಂನಲ್ಲಿರುವ ಅರಣ್ಯ ಭವನದಲ್ಲಿ ಜೀವ ವೈವಿದ್ಯಮಂಡಳಿ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಔಷಧಿ ಮೂಲಿಕಾ ಸಂಪತ್ತಿನ ಸಂರಕ್ಷಣೆ : ಸವಾಲಯಗಳು ಹಾಗೂ ಮುಂದಿನ ಯೋಜನೆಗಳ ಕುರಿತು ರಾಜ್ಯಮಟ್ಟದ ಸಮಾಲೋಚನಾ ಕಾರ್ಯಾಗಾರದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು ಇಂದಿನ ಈ ಕಾರ್ಯಾಗಾರದಲ್ಲಿ ಚರ್ಚೆಯಾಗುವ ವಿಷಯ ಹಾಗೂ ಅಭಿಪ್ರಾಯಗಳನ್ನು ಸರ್ಕಾರದ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲು ಯೋಜಿಸಲಾಗುವುದು ಎಂದು ಹೇಳಿದರು.

ಔಷಧಿ ಸಸ್ಯಗಳ ಕಣ್ಮರೆಗೆ ನಾವೇ ಕಾರಣರಾಗಿದ್ದು ಸಸ್ಯ ಸಂಪತ್ತಿನ ರಕ್ಷಣೆ ನಮ್ಮ ಜವಾಬ್ದಾರಿಯಾಗಿದೆ. ಈಗಾಗಲೇ ಮಂಡಳಿ ವತಿಯಿಂದ ಔಷಧಿ ಸಸ್ಯಗಳ ಅಪಾರ ಜ್ಞಾನ ಹೊಂದಿರುವ ಜನಪದ ವೈದ್ಯರ ಜ್ಞಾನವನ್ನು ಸಂರಕ್ಷಿಸಲು ಹಾಗೂ ಮುಂದಿನ ಪೀಳಿಗೆಗೆ ದಾಖಲು ಮಾಡುವ ಕಾರ್ಯ ಪೂರ್ಣಗೊಂಡಿದ್ದು, ಅತ್ಯಂತ ಹೆಚ್ಚು ಔಷಧಿ ಸಸ್ಯಗಳನ್ನು ಹೊಂದಿರುವ ರಾಜ್ಯದ ವಿವಿಧ ಸ್ಥಳಗಳನ್ನು ಗುರುತಿಸುವ ಕಾರ್ಯ ಸಹ ಮುಗಿದಿದೆ ಎಂದು ಹೇಳಿದರು.

ಕರ್ನಾಟಕ ಔಷಧಿ ಮೂಲಿಕಾ ಮಂಡಳಿ ಹಾಗೂ ಅರಣ್ಯ ಇಲಾಖೆಯ ಜೊತೆ ಸೇರಿ 5 ವರ್ಷಗಳ ಕಾಲ ಈ ಅಧ್ಯಯನವನ್ನು ನಡೆಸಲಾಗಿದ್ದು ನಾಡಿನ ಎಲ್ಲೆಡೆ ಕಾಡಿನ ಪ್ರದೇಶಗಳಲ್ಲಿರುವ ವಿವಿಧ ರೀತಿಯ ಮರ, ಪೊದೆ ಹಾಗೂ ಬಳ್ಳಿಗಳ ಪ್ರಬೇದಗಳ ವೈವಿದ್ಯತೆ ಹಾಗೂ ಸಂಪನ್ಮೂಲಗಳ ಅರಿವಿನ ಸಂರಕ್ಷಣೆ ಕಾರ್ಯ ಮಂಡಳಿಯಿಂದ ನಡೆದಿದೆ ಎಂದು ತಿಳಿಸಿದರು.

ಕರ್ನಾಟಕದ ಎಲ್ಲಾ ಪ್ರದೇಶಗಳ ಅರಣ್ಯದಲ್ಲಿರುವ ಔಷಧಿ ಸದಸ್ಯ ಸಂಪನ್ಮೂಲಗಳ ಲಭ್ಯತೆ ಕುರಿತು ಸಮಗ್ರ ಅಧ್ಯಯನವೊಂದನ್ನು  ಜೀವ ವೈವಿಧ್ಯ ಮಂಡಳಿಯು ಇತ್ತೀಚೆಗೆ ಪೂರೈಸಿದೆ.

**"Assessment of population status and removal of bio-resources in forest with special emphasis on medical plants in Karnataka"** ಎಂಬ ವ್ಯಾಪಕ ಗಣತಿಯಾಧಾರಿತ ಈ ಅಧ್ಯಯನವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಷ್ಟ್ರೀಯ ಔಷಧಿ

ಮೂಲಿಕಾ ಪ್ರಾಧಿಕಾರದ ಅನುದಾನದೊಂದಿಗೆ ಕರ್ನಾಟಕ ಔಷಧಿಮೂಲಿಕಾ ಮಂಡಳಿ ಹಾಗೂ ಅರಣ್ಯ ಇಲಾಖೆಯ ಜೋತೆ ಸೇರಿ ಕೈಗೊಂಡಿತ್ತು. ಸಸ್ಯ ಸಂಪತ್ತಿನ ಸಂರಕ್ಷಣೆ ದೃಷ್ಟಿಯಿಂದ ಈ ಪ್ರಯತ್ನವು ರಾಷ್ಟ್ರಮಟ್ಟದ ಮಹತ್ವ ಹೊಂದಿದೆ.

ಈ ಅಧ್ಯಯನವನ್ನು ಐದು ವರ್ಷಗಳ ಕಾಲ ನಡೆಸಲಾಗಿದ್ದು, ನಾಡಿನ ಎಲ್ಲೆಡೆ ಕಾಡಿನ ಪ್ರದೇಶಗಳಲ್ಲಿ ಲಭ್ಯವಿರುವ ಎಲ್ಲಾ ಬಗೆಯ ಮರ, ಪೊದೆ ಹಾಗೂ ಬಳ್ಳಿಗಳ  ಪ್ರಬೇಧಗಳ ವೈವಿಧ್ಯತೆ ಹಾಗೂ ಈ ಸಂಪನ್ಮೂಲಗಳ ಹರಿವಿನ ಸಂರಕ್ಷಣೆ ಇದರ ಮುಖ್ಯ ಉದ್ದೇಶವಾಗಿತ್ತು .

ರಾಜ್ಯದ ಅರಣ್ಯ ಪ್ರದೇಶದಲ್ಲಿ ಸುಮಾರು 12,820 ಕಿ.ಮೀ ಗಳಷ್ಟು ದೂರ ಸಮೀಕ್ಷಾರೇಖೆ ಗುರುತಿಸಿ, ಅವುಗಳ ಗುಂಟ ಸಾಗಿ ಈ ದಾಖಲಾತಿಯನ್ನು ಮಾಡಲಾಗಿದ್ದು, ದೇಶದಲ್ಲಿ ಈ ವರೆಗೆ ಕೈಗೊಂಡ ಈ ಬಗೆಯ ವ್ಯಾಪಕ ವೈಜ್ಞಾನಿಕ ಸಮೀಕ್ಷೆಗಳಲಲ್ಲಿ ಇದೊಂದು ಅನನ್ಯ ಪ್ರಮುಖ ಅಧ್ಯಯನವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿರಿಯ ಅರಣ್ಯ ಅಧಿಕಾರಿಗಳು, ಸಸ್ಯ ಶಾಸ್ತ್ರಜ್ಞರು ಹಾಗೂ ನುರಿತ ಕ್ಷೇತ್ರ ತಜ್ಞರ ಸಹಯೋಗದಲ್ಲಿ ಈ ಅಧ್ಯಯನ ನಡೆಸಲಾಗಿದ್ದ ವರದಿಯನ್ನು ಬಿಡುಗಡೆ ಮಾಡಲಾಯಿತು.

ವಿವಿಧ ತಜ್ಞರುಗಳನ್ನೊಳಗೊಂಡ ಕಾರ್ಯಾಗಾರವು 4 ಗೋಷ್ಠಿಗಳಲ್ಲಿ ವಿಭಜಿಸಲಾಗಿದ್ದು ಅರಣ್ಯ ಇಲಾಖೆ ಅಧಿಕಾರಿಗಳು, ಸಸ್ಯ ವಿಜ್ಞಾನಿಗಳು ಸೇರಿದಂತೆ ಪರಿಸರ ಪ್ರೇಮಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಪ್ರಶಸ್ತಿ ಪುರಸ್ಕಾರ ಸಮಾರಂಭ

ಬೆಂಗಳೂರು, ನವೆಂಬರ್ 21 (ಕರ್ನಾಟಕ ವಾರ್ತೆ)

ನಮ್ಮ ನಾಡಿನ ಎಲ್ಲಾ ಕಲೆಗಳಿಗೂ ತಾಯಿ ಬೇರು ಜಾನಪದ, ಜನಪದ ಕಲಾವಿದರು ನಿರ್ಲಕ್ಷ್ಯಕ್ಕೆ ಒಳಗಾಗಿ ಮೂಲೆ ಗುಂಪಾಗಿದ್ದರೂ ಕಲೆಗಾಗಿ ಬದುಕು ಸವೆಸಿದವರು.  ಅದಕ್ಕೆ ಜೀವಂತ ಸಾಕ್ಷಿ ಸಾವಿರಾರು ಜನಪದ ಕಲಾವಿದರು ಇಂದೂ ತೆರೆ ಮರೆಯಲ್ಲಿಯೇ ಇದ್ದು ಜೀವನ ಸಾಗಿಸುತ್ತಿರುವುದು.  ಇಂತಹ ಕಲಾವಿದರನ್ನು ಗುರುತಿಸಿ ಸಾರ್ವಜನಿಕ ವೇದಿಕೆಯಲ್ಲಿ ಗೌರವ ಪ್ರಶಸ್ತಿಗಳನ್ನು ಅರ್ಪಿಸುವುದೇ ನಮ್ಮ ಪಾಲಿನ ಸೌಭಾಗ್ಯ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಾತಾ ಬಿ. ಮಂಜಮ್ಮ ಜೋಗತಿ ಅವರು ತಿಳಿಸಿದರು.

ಇಂದು ನಗರದ ಕಲಾಕ್ಷೇತ್ರದಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಹಮ್ಮಿಕೊಂಡಿದ್ದ 2019ನೇ ಸಾಲಿನ ಗೌರವ ಪ್ರಶಸ್ತಿ ಮತ್ತು 2014 ರಿಂದ 2017ರ ವರೆಗಿನ ಪುಸ್ತಕ ಬಹುಮಾನ ವಿತರಣ ಸಮಾರಂಭದ ಅಧ್ಯಕ್ಷತೆಯನ್ನುವಹಿಸಿ ಮಾತನಾಡಿದ ಅವರು  ನೂರಾರು

ಸಂಖ್ಯೆಯಲ್ಲಿ ಅಲ್ಲದಿದ್ದರೂ ವರ್ಷದಲ್ಲಿ ರಾಜ್ಯದ 30 ಜಿಲ್ಲೆಗಳಿಂದ ಕನಿಷ್ಠ 30 ಜನರಿಗೆ ಪ್ರಶಸ್ತಿಯ ಭಾಗ್ಯ ದೊರಕಿದೆ ಎಂದು ಹೇಳಿದರು.

ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡುವಾಗ ಸಾಮಾಜಿಕ ನ್ಯಾಯ, ಮಹಿಳಾ ನ್ಯಾಯ, ಪ್ರಾದೇಶಿಕ ನ್ಯಾಯದ ಮೂಲಕ ಪುರುಷ ಮತ್ತು ಮಹಿಳಾ ಕಲಾವಿದರನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವುದು ವಿಶೇಷ. ಹಾಗೆಯೇ ಇಬ್ಬರು ವಿದ್ವಾಂಸರಿಗೆ ತಜ್ಞ ಪ್ರಶಸ್ತಿ ಕೂಡ ಕೊಡಲಾಗಿದೆ. 2014 ರಿಂದ 2017 ರ ವರೆಗಿನ 10 ಜನಪದ ಕೃತಿಗಳಿಗೆ ಪುಸ್ತಕ ಬಹುಮಾನ ಹೀಗೆ ಒಟ್ಟು 40 ಕಲಾವಿದರಿಗೆ ಅಕಾಡೆಮಿ ಪ್ರಶಸ್ತಿಗಳನ್ನು ನೀಡಲಾಗಿದೆ.

2019 ನೇ ಸಾಲಿನ ಜಾನಪದ ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿಗೆ ಆಯ್ಕೆಗೊಂಡಿರುವ ನಮ್ಮ ನಾಡಿದ ಹಿರಿಯ ಕಲಾವಿದ ಚೇತನಗಳಿಗೆ ಮೊದಲು ನನ್ನ ಹೃದಯ ಪೂರಕ ನಮನಗಳು ಎಂದರು.

ತಮ್ಮ ಈ ಕಾರ್ಯದಲ್ಲಿ ಬೆನ್ನುಬಾಗಿ ನಿಂತು ಕಾರ್ಯನಿರ್ವಹಿಸುತ್ತಿರುವ ಅಕಾಡೆಮಿಯ ಸರ್ವ ಸದಸ್ಯರು, ರಿಜಿಸ್ಟ್ರಾರ್ ಹಾಗೂ ಅಕಾಡೆಮಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯಕ್ರಮದಲ್ಲಿ ಡಾ.ಸಿದ್ಧಲಿಂಗಯ್ಯ, ಕನ್ನಡ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಡಾ.ಹಿ.ಚಿ.ಬೋರಲಿಂಗಯ್ಯ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಎನ್. ನಮ್ರತ ಹಾಗೂ ಹಲವು ಗಣ್ಯರು ಭಾಗವಹಿಸಿದ್ದರು.

## ಕನ್ನಡ ಕಾಯಕ ವರ್ಷಾಚರಣೆಗೆ ಅಷ್ಟ ಕಾರ್ಯಸೂಚಿ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ

ಬೆಂಗಳೂರು: ಕನ್ನಡ ಕಾಯಕ ವರ್ಷಾಚರಣೆಗೆ ಪೂರಕವಾದ ಅಷ್ಟ ಕಾರ್ಯಸೂಚಿಗಳನ್ನು ಮಾನ್ಯ **ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ** ಅವರು ವಿಧಾನಸೌಧದಲ್ಲಿಂದು ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಮುಖ್ಯಮಂತ್ರಿಗಳು, ಈಗಾಗಲೇ ಘೋಷಣೆ ಮಾಡಲಾಗಿರುವ "ಕನ್ನಡ ಕಾಯಕ ವರ್ಷಾಚರಣೆ 2020–21" ಕ್ಕೆ ಸಂಬಂಧಿಸಿದಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಾರ್ಯಸೂಚಿಗಳ

ಅಡಿಯಲ್ಲಿ ಹಲವು ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿದ್ದು, ಎಲ್ಲ ಸರ್ಕಾರಿ ಮತ್ತು ಸರ್ಕಾರೇತರ ಇಲಾಖೆಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಈ ಬಗ್ಗೆ ಕಡ್ಡಾಯವಾಗಿ ಕಾರ್ಯನಿರ್ವಹಿಸುವಂತೆ ತಿಳಿಸಿದರು.

**ಕನ್ನಡ ಕಾಯಕ ವರ್ಷದ ಅಷ್ಟ ಕಾರ್ಯಸೂಚಿಗಳಿ:**

i. ವಿಧಾನಸೌಧದಿಂದ ಗ್ರಾಮಪಂಚಾಯಿತಿಯವರೆಗೆ ಕನ್ನಡದಲ್ಲೇ ಆಡಳಿತ ಇದು ನಮ್ಮ ಕನ್ನಡ ಕಾಯಕ.

ii. ಶಿಕ್ಷಣ ಮಾಧ್ಯಮ ಕನ್ನಡವಾಗಿರಲಿ. ಕನ್ನಡದಲ್ಲಿ ಕಲಿಯುವುದು ಸಹಜ, ಸುಂದರ. ಇದು ನಮ್ಮ ಕನ್ನಡ ಕಾಯಕ.

iii. ನೆಲ, ಜಲ, ವಿದ್ಯುತ್, ಸಾರಿಗೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡವರು ಕನ್ನಡಿಗರಿಗೆ ಉದ್ಯೋಗ ನೀಡುವುದು ಕೃತಜ್ಞತಾಪೂರ್ವ ಕನ್ನಡದ ಕಾಯಕ.

iv. ಕರ್ನಾಟಕದಲ್ಲಿ ಅನ್ನ ತಿನ್ನುವ ಪ್ರತಿಯೊಂದು ಸಂಸ್ಥೆ, ಸಂಘ, ವ್ಯಕ್ತಿಗಳು ಸರೋಜಿನಿ ಮಹಿಷಿ ವರದಿ ಪಾಲಿಸುವುದು ಅವಶ್ಯ ಕನ್ನಡ ಕಾಯಕ.

v. ನಮ್ಮ ವ್ಯವಹಾರ ಕನ್ನಡದಲ್ಲಿರಲಿ; ಮನೆ, ಮನ, ನಾಮಫಲಕಗಳಲ್ಲೂ ಕನ್ನಡವೇ ಇರಲಿ. ಅದುವೇ ಕನ್ನಡದ ಕಾಯಕ.

vi. ಕನ್ನಡದ ನಾಳೆಗಳಿಗಾಗಿ ಗಣಕಯಂತ್ರಗಳಲ್ಲಿ ಕನ್ನಡವನ್ನೇ ಬಳಸೋಣ; ಇದು ನಮ್ಮ ಕನ್ನಡ ಕಾಯಕ.

vii. ಕರ್ನಾಟಕಕ್ಕೆ ಗಡಿ ಇದೆ. ಕನ್ನಡಕ್ಕೆ ಗಡಿ ಇಲ್ಲ, ಕನ್ನಡ ಪರಂಪರೆ ವಿಶ್ವ ಪರಂಪರೆ, ವಿಶ್ವಮಾನವತತ್ವ ನಮ್ಮ ಕನ್ನಡ ಕಾಯಕ.

viii. ನಿರಂತರ ಕನ್ನಡ ಕಲಿಕೆ, ನಿರಂತರ ಕನ್ನಡ ಬಳಕೆ, ಇದು ನಮ್ಮ ಕನ್ನಡ ಕಾಯಕ.

ಕನ್ನಡ ಕಾಯಕ ವರ್ಷದಲ್ಲಿ ಕನ್ನಡ ಭಾಷೆಯನ್ನು ವಿಸ್ತಾರಗೊಳಿಸುವುದು ಬಹುಮುಖ್ಯವಾದ ಅಂಶವಾಗಿದೆ. ಸರ್ಕಾರದ ಇಲಾಖೆಗಳು ಎಲ್ಲ ಹಂತದಲ್ಲೂ ಕನ್ನಡವನ್ನು ಅನುಷ್ಠಾನಗೊಳಿಸಬೇಕಿದೆ. ಅಲ್ಲದೆ ಸಂಘ–ಸಂಸ್ಥೆಗಳು, ನಾಗರಿಕರೂ ಸಹ ಇಂತಹ ಮಹತ್ತರ ಕಾರ್ಯದಲ್ಲಿ ಕೈಜೋಡಿಸುವುದು ಬಹುಮುಖ್ಯವಾಗಿದೆ ಎಂದರು.

ಕನ್ನಡ ಕಾಯಕದ ಕೆಲಸವನ್ನು ಎಲ್ಲರೂ ಒಟ್ಟಾಗಿ ಮಾಡಬೇಕಿದ್ದು, ಎಲ್ಲ ಕನ್ನಡಿಗರೂ ಈ ಒಂದು ಕಾಯಕದಲ್ಲಿ ಸಹಕಾರ ನೀಡುವಂತೆ ಕೋರಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ, ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ ಮತ್ತಿತರರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**2020-21 ನೇ ಸಾಲಿಗೆ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿದೇಸಾಯಿ,ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ 7 ನೇ ತರಗತಿಯಲ್ಲಿ ಖಾಲಿ ಇರುವ 6 ಜನ (2 ಬಾಲಕರಿಗೆ, 4 ಬಾಲಕಿಯರಿಗೆ) 8ನೇ ತರಗತಿಯಲ್ಲಿ ಖಾಲಿ ಇರುವ 8 ಜನ (1 ಬಾಲಕ ಹಾಗೂ 7 ಬಾಲಕಿಯರು) 9ನೇ ತರಗತಿಯಲ್ಲಿ ಖಾಲಿ ಇರುವ 12 ಜನ(5 ಬಾಲಕರು, 7 ಬಾಲಕಿಯರು) ಸ್ಥಾನಗಳಿಗೆ ಪ್ರವೇಶಾತಿ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ.**

**ಅರ್ಜಿಗಳು ಸಂಘದ ವೆಬ್‌ಸೈಟ್ :www.kreis.kar.nic.in ಅಥವಾ ಮೊರಾರ್ಜಿದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಲಭ್ಯವಿದ್ದು ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಡಿಸೆಂಬರ್-01 ರ ಸಂಜೆ:5.30ರೊಳಗೆ ಅತ್ತಿರದ ಮೊರಾರ್ಜಿದೇಸಾಯಿ ವಸತಿಮ ಶಾಲೆ ಅಡಕಮಾರನ ಹಳ್ಳಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ತೆಲಗರಹಳ್ಳಿ ಪ್ರಾಂಶುಪಾಲರಿಗೆ ಅಥವಾ ಅರ್ಜಿಗಳನ್ನು PDF ನಲ್ಲಿ ಹಾಗೂ Passport Size Photo ವನ್ನು jpeg ಫಾರ್ಮೇಟ್‌ನಲ್ಲಿ ಸ್ಕ್ಯಾನ್ ಮಾಡಿ, ಇಮೇಲ್ ವಿಳಾಸ dco.blru.kreis@gmail.com. ಗೆ ಕಳುಹಿಸಬಹುದಾಗಿದೆ. ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.**

**-:ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:- 1)ಶ್ರೀಮತಿ ರತ್ನಮ್ಮ ಪ್ರಾಂಶುಪಾಲರು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ತೆಲಗರಹಳ್ಳಿ, ಪೋನ್.ನಂ:9008224304. 2)ಶ್ರೀಮತಿ ವೈಶಾಲಿ ಪ್ರಾಂಶುಪಾಲರು, ಮೊರಾರ್ಜಿದೇಸಾಯಿ ವಸತಿಮ ಶಾಲೆ ಅಡಕಮಾರನಹಳ್ಳಿ, ಪೋನ್.ನಂ:8123328962/9035509282**

## ಜನಸಹಭಾಗಿತ್ವದಲ್ಲಿ ಮೂಲಿಕೆ ಸಂರಕ್ಷಣೆ-ಅನಂತ ಹೆಗಡೆ ಅಶೀಸರ

**ಜನಸಹಭಾಗಿತ್ವದಲ್ಲಿ ರಾಜ್ಯದಲ್ಲಿ ಔಷಧಿ ಗಿಡಮೂಲಿಕೆಗಳ ಸಂರಕ್ಷಣೆಗೆ ಬರುವ ದಿನಗಳಲ್ಲಿ ವಿನೂತನ ಯೋಜನೆಗಳನ್ನು ರೂಪಿಸುವುದಾಗಿ ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ರವರು ಹೇಳಿದರು. ಅವರು ಇಂದು ಅರಣ್ಯಭವನದಲ್ಲಿ ಜೀವವೈವಿಧ್ಯ**

**ಮಂಡಳಿ ಆಶ್ರಯದಲ್ಲಿ ನಡೆದ ರಾಜ್ಯಮಟ್ಟದ "ಔಷಧೀಮೂಲಿಕಾ ಸಂಪತ್ತಿನ ಸಂರಕ್ಷಣೆ: ಸವಾಲುಗಳು ಹಾಗೂ ಯೋಜನೆಗಳು" ಸಮಾಲೋಚನಾ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.**

ಃಬೆಂಗಳೂರಿನ ಅರಣ್ಯಭವನದಲ್ಲಿ ಕಾರ್ಯಾಗಾರ ಬೆಳಗ್ಗೆ 10.30 ಕ್ಕೆ ಉದ್ಘಾಟನೆ ಆಯಿತು.ರಾಜ್ಯ ಅರಣ್ಯ ಪರಿಸರ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಸಂದೀಪ ದವೆ ಅವರು ಕಾರ್ಯಕ್ರಮ ಉದ್ಘಾಟಿಸಿದರು.ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ರವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಜೀವ ವೈವಿಧ್ಯ ಮಂಡಳಿ ಕಳೆದ 5 ವರ್ಷಗಳಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ನಡೆಸಿರುವ ಸಸ್ಯ ಗಣತಿಯ ವರದಿಗಳು ಬಿಡುಗಡೆ ಆದವು.ಪಿ.ಸಿ.ಸಿ.ಎಫ್ ಸಂಜಯ್ ಮೋಹನ್, ಪಿ.ಸಿ.ಸಿ.ಎಫ್ ರಾಜೀವ ರಂಜನ್, ಪಿ.ಸಿ.ಸಿ.ಎಫ್ (ಅಭಿವೃದ್ಧಿ) ಶ್ರೀ ಆರ್.ಕೆ. ಸಿಂಗ್, ಎ.ಪಿ.ಸಿ.ಸಿ.ಎಫ್ ಹಾಗೂ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿ ರವರಾದ ಶ್ರೀ ಪುನೀತ್ ಪಾಠಕ್, ಶ್ರೀ ಯು.ವಿ. ಸಿಂಗ್ (ನಿವೃತ್ತ) ಹಿರಿಯ ಅರಣ್ಯ ಅಧಿಕಾರಿಗಳು, ಆಯುಷ್ ಕಮೀಶನರ್ ಶ್ರೀಮತಿ ಮೀನಾಕ್ಷಿ ನೇಗಿ ಮುಂತಾದ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕದ ಎಲ್ಲ ಪ್ರದೇಶಗಳ ಅರಣ್ಯದಲ್ಲಿರುವ ಔಷಧೀ ಸಸ್ಯ ಸಂಪನ್ಮೂಲಗಳ ಲಭ್ಯತೆ ಕುರಿತಾಗಿ ಕೈಗೊಂಡ ಸಮಗ್ರ ಅಧ್ಯಯನ ವರದಿಗಳನ್ನು ಬಿಡುಗಡೆಗೊಳಿಸಲಾಯಿತು."Assessment of population status and removal of bio-resources in forest with special emphasis on medical plants in Karnataka" ಎಂಬ ಈ ಅಧ್ಯಯನವನ್ನು, ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಷ್ಟ್ರೀಯ ಔಷಧಿಮೂಲಿಕಾ ಪ್ರಾಧಿಕಾರದ (NMPB) ಅನುದಾನದೊಂದಿಗೆ, ಕರ್ನಾಟಕ ಔಷಧಿಮೂಲಿಕಾ ಮಂಡಳಿ ಹಾಗೂ ಕರ್ನಾಟಕ ಅರಣ್ಯ ಇಲಾಖೆಯ ಜೊತೆ ಸೇರಿ ಕೈಗೊಂಡಿತ್ತು. ಸಸ್ಯ ಸಂಪತ್ತಿನ ಸಂರಕ್ಷಣೆ ದೃಷ್ಟಿಯಿಂದ ಈ ಪ್ರಯತ್ನವು ರಾಷ್ಟ್ರಮಟ್ಟದ ಮಹತ್ವಹೊಂದಿದೆ. ಈ ವರದಿಗಳಲ್ಲಿ ಸಸ್ಯ ಸಂಪತ್ತಿನ ಹರವು, ಹೆಚ್ಚಾಗಿ ವಹಿವಾಟಾಗುವ ಮೂಲಿಕೆಗಳು, ಅವುಗಳ ಬಳಕೆಯ ರೀತಿ, ಅಳಿವಿನಂಚಿನಲ್ಲಿರುವ ಸಸ್ಯಗಳು ಇತ್ಯಾದಿ ಸಾಕಷ್ಟು ಮಹತ್ವದ ಮಾಹಿತಿಗಳಿವೆ.

**ಪು.ತಿ.ನೆ**

ಅಀ.

ಈ ಯೋಜನೆಯು ಪೂರ್ತಿಗೊಂಡು, ಅಂತಿಮ ವೈಜ್ಞಾನಿಕ ವರದಿಗಳು ಬಿಡುಗಡೆಯಾಗುತ್ತಿರುವ ಈ ಸಂದರ್ಭದಲ್ಲಿ, ರಾಜ್ಯದಲ್ಲಿ ಔಷಧಿಸಸ್ಯಗಳ ಸಂರಕ್ಷಣೆ ಮತ್ತು ಸಂವರ್ಧನೆ ಕುರಿತಂತೆ ಮುಂದೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಕುರಿತು ಸಸ್ಯಶಾಸ್ತ್ರಜ್ಞರು, ಸಂಸ್ಥೆಗಳು, ತಳಮಟ್ಟದ ಸಮೀಕ್ಷಾ

ಕಾರ್ಯಕರ್ತರು ವಿವಿಧ ಘೋಷ್ಠಿಗಳಲ್ಲಿ ತಮ್ಮ ತಜ್ಞ ಅಭಿಪ್ರಾಯವನ್ನು ನೀಡಿದರು. ಈ ಸಮಾಲೋಚನಾ ಕಾರ್ಯಾಗಾರದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ರಾಜ್ಯದ ಎಲ್ಲ 30 ಜಿಲ್ಲೆಗಳಲ್ಲಿ ಔಷಧಿ ಮೂಲಿಕಾ ಸಂರಕ್ಷಣಾ ಪ್ರದೇಶ ಗುರುತಿಸಿ ಅರಣ್ಯ ಇಲಾಖೆ ಮೂಲಕ ನಿರ್ವಹಣಾ ಯೋಜನೆ ಜಾರಿ ಮಾಡಬೇಕು.
2. ಅರಣ್ಯ ಪ್ರದೇಶದಲ್ಲಿ ಅಪರೂಪದ ಔಷಧಿ ಸಸ್ಯಗಳ ಕಳ್ಳ ಸಾಗಣೆ ನಿಯಂತ್ರಿಸಲು ಕಟ್ಟು ನಿಟ್ಟಿನ ಕಾರ್ಯಕ್ರಮ ರೂಪಿಸಬೇಕು.
3. ಔಷಧಿ ಸಸ್ಯ ಸಂರಕ್ಷಣೆ ಕುರಿತು ಅರಣ್ಯ ಇಲಾಖೆ ಸಿಬ್ಬಂದಿಗೆ ತರಬೇತಿ ನೀಡಬೇಕು.
4. ಬೇಡಿಕೆ ಇರುವ ಔಷಧಿ ಸಸ್ಯ ಬೆಳೆಸಲು ರೈತರಿಗೆ ಮಾರ್ಗದರ್ಶನ ನೀಡಬೇಕು.
5. ಗ್ರಾಮ ಸಾಮೂಹಿಕ ಭೂಮಿಗಳಲ್ಲಿ ಸಾಮಾಜಿಕ ಅರಣ್ಯ ವಿಭಾಗದ ಮೂಲಕ ಔಷಧಿ ವನಗಳನ್ನು ನಿರ್ಮಾಣ ಮಾಡಬೇಕು.
6. ಜೀವವೈವಿಧ್ಯ ಮಂಡಳಿ ಜಿಲ್ಲಾ ಮಟ್ಟದಲ್ಲಿ (ಕನ್ನಡದಲ್ಲಿ) ಔಷಧಿ ಸಸ್ಯ ಅಧ್ಯಯನ ವರದಿಯನ್ನು ಸಂಕ್ಷಿಪ್ತವಾಗಿ ಪ್ರಕಟಿಸಬೇಕು. ಇವುಗಳನ್ನು ಕ್ರೂಢೀಕರಿಸಿ ರಾಜ್ಯಮಟ್ಟದಲ್ಲಿ ಕನ್ನಡದಲ್ಲಿ ಔಷಧಿ ಸಸ್ಯಗಳ ಪ್ರಚಲಿತ ಪರಿಸ್ಥಿತಿ ಬಗ್ಗೆ ವರದಿ ಪ್ರಕಟಿಸಬೇಕು.
7. ರಾಜ್ಯದ ಆಯುರ್ವೇಧ ಉದ್ದಿಮೆಗಳು ಔಷಧಿ ಸಸ್ಯ ಬೆಳೆಸಲು ಯೋಜನೆಗಳಲ್ಲಿ ಪಾಲುದಾರರಾಗಬೇಕು.

## ಕರ್ನಾಟಕದಲ್ಲಿ ಔಷಧಿಮೂಲಿಕೆಗಳ ಸಂರಕ್ಷಣೆ:

# ಮುಂದೆ ಕೈಗೊಳ್ಳಬಹುದಾದ ಕಾರ್ಯಯೋಜನೆಗಳು

**ಶ್ರೀ ಅನಂತ ಹೆಗಡೆ ಅಶೀಸರ**

ಅಧ್ಯಕ್ಷರು, ಕರ್ನಾಟಕಜೀವವೈವಿಧ್ಯ ಮಂಡಳಿ, ಕರ್ನಾಟಕ ಸರ್ಕಾರ, ಬೆಂಗಳೂರು.

**(ಕರ್ನಾಟಕಜೀವವೈವಿಧ್ಯ ಮಂಡಳಿಯು ರಾಷ್ಟ್ರೀಯಔಷಧಿಮೂಲಿಕಾ ಪ್ರಾಧಿಕಾರದ (NMPB) ಅನುದಾನದೊಂದಿಗೆಕೈಗೊಂಡ, ರಾಜ್ಯದ ಅರಣ್ಯಗಳಲ್ಲಿ ಲಭ್ಯವಿರುವಔಷಧಿಸಸ್ಯ ಸಂಪನ್ಮೂಲಗಳ ಕುರಿತ 5 ವರ್ಷಗಳ ಅಧ್ಯಯನಯೋಜನೆಯು ಮುಕ್ತಾಯಗೊಳ್ಳುತ್ತಿರುವ ಸಂದರ್ಭದಲ್ಲಿ ದಿನಾಂಕ:21/11/2020 ರಂದು ಬೆಂಗಳೂರಿನ ಅರಣ್ಯಭವನದಲ್ಲಿ ಹಮ್ಮಿಕೊಂಡಿರುವ, ಸಮಾಲೋಚನಾಕಾರ್ಯಾಗಾರದಲ್ಲಿ ಮಂಟಿಸಿರುವ ಅಧ್ಯಕ್ಷೀಯ ಭಾಷಣದ ಸಾರಾಂಶ).**

## ಕಾರ್ಯಾಗಾರದ ಹಿನ್ನೆಲೆ ಮತ್ತು ಉದ್ದೇಶಗಳು:

ಕರ್ನಾಟಕದ ವಿಶಾಲವಾದ ವೈವಿಧ್ಯಮಯಅರಣ್ಯ ಪ್ರದೇಶಗಳಲ್ಲಿರುವ ಔಷಧಿಸಸ್ಯ ಸಂಪನ್ಮೂಲಗಳ ಲಭ್ಯತೆಕುರಿತಾಗಿ ಸಮಗ್ರಅಧ್ಯಯನವೊಂದನ್ನುಕರ್ನಾಟಕಜೀವವೈವಿಧ್ಯ ಮಂಡಳಿಯು ಇದೀಗ ಪೂರೈಸುತ್ತಿದೆ."Assessment of population status and removal of bio-resources in forest with special emphasis on medicinal plants in Karnataka" ಎಂಬ ಸ್ಥಳ–ಗಣತಿಯಾಧಾರಿತ ಈ ಅಧ್ಯಯನವನ್ನು, ಕರ್ನಾಟಕಜೀವವೈವಿಧ್ಯ ಮಂಡಳಿಯು ರಾಷ್ಟ್ರೀಯಔಷಧಿಮೂಲಿಕಾ ಪ್ರಾಧಿಕಾರದ (NMPB) ಅನುದಾನದೊಂದಿಗೆ, ಕರ್ನಾಟಕಔಷಧಿಮೂಲಿಕಾ ಮಂಡಳಿ ಹಾಗೂ ಕರ್ನಾಟಕಅರಣ್ಯಇಲಾಖೆಯ

ಸಹಭಾಗಿತ್ವದಲ್ಲಿಕೈಗೊಂಡಿದೆ. ನಾಡಿನಕಾಡಿನಲ್ಲಿ ಲಭ್ಯವಿರುವಎಲ್ಲ ಬಗೆಯ ಮರ, ಪೊದೆ ಹಾಗೂ ಬಳ್ಳಿಗಳ ಪ್ರಭೇಧಗಳ ವೈವಿಧ್ಯತೆ ಹಾಗೂ ಈ ಸಂಪನ್ಮೂಲಗಳ ಹರವಿನ ಸಮೀಕ್ಷೆಇದರ ಮುಖ್ಯಉದ್ದೇಶ. ಸುಮಾರು 12,820 ಕಿ.ಮೀ.ಗಳಷ್ಟು ದೂರ ಸಮೀಕ್ಷಾರೇಖೆ ಗುರುತಿಸಿ, ಅವುಗಳ ಗುಂಟಸಾಗಿ ಈ ದಾಖಲಾತಿಯನ್ನು ಮಾಡಲಾಗಿದ್ದು, ಪ್ರಾಯಶಃಈವರೆಗೆರಾಜ್ಯದಅರಣ್ಯದಲ್ಲಿಕೈಗೊಂಡ ಈ ಬಗೆಯ ಸಮೀಕ್ಷೆಗಳಲ್ಲಿ ಇದು ಪ್ರಮುಖವಾದದ್ದು, ಅರಣ್ಯಾಧಿಕಾರಿಗಳು, ಸಸ್ಯಶಾಸ್ತ್ರಜ್ಞರು ಹಾಗೂ ಕ್ಷೇತ್ರತಜ್ಞರ ಸಹಯೋಗದಲ್ಲಿ ಈ ಅಧ್ಯಯನವನ್ನುಕೈಗೊಂಡು, ಇದೀಗ ಅರಣ್ಯ ವಿಭಾಗವಾರು ವರದಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ವರದಿಗಳಲ್ಲಿ ಸಸ್ಯಸಂಪತ್ತಿನ ಹರವು, ಹೆಚ್ಚಾಗಿ ವಹಿವಾಟಾಗುವ ಮೂಲಿಕೆಗಳು, ಅವುಗಳ ಬಳಕೆಯ ರೀತಿ, ಅಳಿವಿನಂಚಿನಲ್ಲಿರುವ ಸಸ್ಯಗಳು-ಇತ್ಯಾದಿ ಮಹತ್ವದ ಮಾಹಿತಿಗಳಿವೆ. ಸಸ್ಯಸಂಪತ್ತಿನ ಸಂರಕ್ಷಣೆದೃಷ್ಟಿಯಿಂದ ಈ ಪ್ರಯತ್ನವು ಮಹತ್ವದ್ದಾಗಿದ್ದು, ಇಲ್ಲಿರುವ ಮಾಹಿತಿಗಳು ಅಮೂಲ್ಯವಾಗಿದೆ.

ಈ ಸಂದರ್ಭದಲ್ಲಿ, ರಾಜ್ಯದಲ್ಲಿ ಔಷಧಿಸಸ್ಯಗಳ ಸಂರಕ್ಷಣೆ ಮತ್ತು ಸಂವರ್ಧನೆಕುರಿತಂತೆ ಭವಿಷ್ಯದಲ್ಲಿ ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಕುರಿತುಚಿಂತಿಸುವಉದ್ದೇಶದಿಂದ ಈ ಸಮಾಲೋಚನಾಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.ಈ ಅಧ್ಯಯನದಲ್ಲಿಪಾಲ್ಗೊಂಡು ಅಧಿಕಾರಿಗಳು, ಸಿಬ್ಬಂದಿಗಳು, ತಜ್ಞರುಗಳು ಒಳಗೊಂಡಂತೆ ಎಲ್ಲರಿಗೂಕೃತಜ್ಞತೆ ಸಲ್ಲಿಸುವುದರೊಂದಿಗೆ, ಈ ಮಾಹಿತಿಯನ್ನು ಮುಂಬರುವ ದಿನಗಳಲ್ಲಿ ಸಂರಕ್ಷಣಾಕಾರ್ಯಕ್ಕೆ ಬಳಸುವ ಮಾರ್ಗಗಳ ಕುರಿತಂತೆ

ಈ ಸಂದರ್ಭದಲ್ಲಿ ವಿವರವಾದಚರ್ಚೆ ನಡೆದು, ಭವಿಷ್ಯದ ಕಾರ್ಯಕ್ರಮಗಳು ರೂಪುಗೊಳ್ಳಲಿಎಂದು ಹಾರೈಸುತ್ತೇನೆ.

ಪರಿಸರ ಮತ್ತುಅರಣ್ಯ ಸಂರಕ್ಷಣೆಯಕ್ಷೇತ್ರದಲ್ಲಿ ಸುಮಾರು ನಾಲ್ಕು ದಶಕಗಳಿಂದ ತೊಡಗಿಸಿಕೊಂಡವನಾಗಿ, ಈ ಔಷಧಿಮೂಲಿಕೆಗಳ ಪಾರಿಸಾರಿಕ ಮಹತ್ವ,ಆರೋಗ್ಯಕ್ಷೇತ್ರದಲ್ಲಿನ ಮಹತ್ವವನ್ನುಅರಿತಿದ್ದೇನೆ. ಹಾಗೆಂದೇ, ಅವುಗಳ ಸಂರಕ್ಷಣೆಯಅಗತ್ಯಕೂಡಅರಿವಿದೆ. ಹೀಗಾಗಿ, ಸರ್ಕಾರದವಿವಿಧ ಇಲಾಖೆಗಳು, ಸಮುದಾಯ ಸಂಘಟನೆಗಳು, ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳು ಇವೆರೆಲ್ಲರಜೊತೆಯಾಗಿ ವಿವಿಧ ಆಯಾಮಗಳಲ್ಲಿ ಸಂರಕ್ಷಣೆ ಮತ್ತು ಸಂವರ್ಧನೆ ಕಾರ್ಯಗಳಿಗೆ ಕೈಜೋಡಿಸಿದ ಅನುಭವವೂಇದೆ. ವಿಶೇಷವಾಗಿ ಅರಣ್ಯ ಇಲಾಖೆ ಹಾಗೂ ವಿವಿಧಗ್ರಾಮಅರಣ್ಯ ಸಮಿತಿಗಳ ಜೊತೆಯಾಗಿ, ಮೂಲಿಕಾ ಸಂಪತ್ತಿರುವ ಕಾನುಗಳ ರಕ್ಷಣೆ, ನರ್ಸರಿ ಸ್ಥಾಪನೆ ಮತ್ತು ನಿರ್ವಹಣೆ, ಕಿರುಅರಣ್ಯ ಉತ್ಪನ್ನಗಳ ಸುಸ್ಥಿರ ಕೊಯಿಲು, ಮನೆಮದ್ದುತರಬೇತಿಅನುಭವದಹಿನ್ನೆಲೆಯಲ್ಲಿ, ಔಷಧಿಮೂಲಿಕೆಗಳ ಸಂರಕ್ಷಣೆಗಾಗಿ ನಾವು ಕೈಗೊಳ್ಳಬಹುದಾದ ಮಾರ್ಗೋಪಾಯಗಳ ಕುರಿತು ನನ್ನ ಸಲಹೆ ಹಾಗೂ ಅಭಿಪ್ರಾಯಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಈ ಕುರಿತುತಾವೂತಮ್ಮ ಸಲಹೆ-ಅಭಿಪ್ರಾಯ ನೀಡಿ, ಅವನ್ನು ಸೂಕ್ತ ಕಾರ್ಯಯೋಜನೆಗಳನ್ನಾಗಿ ಪರಿವರ್ತಿಸಲು ಸಹಕರಿಸುತ್ತೀರಿ ಎಂಬ ಆಶಯ ನನಗಿದೆ.

## ಪ್ರಮುಖ ಸಮಸ್ಯೆಗಳು:

ಕಳೆದ ಕೆಲವು ದಶಕಗಳಿಂದ ವಿವಿಧ ಕಾರಣಗಳಿಗಾಗಿಆಗುತ್ತಿರುವಅರಣ್ಯ ನಾಶ, ಕಾಡಿನಒತ್ತುವರಿ, ಬೇಸಿಗೆಯ ಕಾಡಿನ ಬೆಂಕಿ, ಮರಮಟ್ಟುಗಳು ಹಾಗೂ ಅರಣ್ಯ ಉಪಉತ್ಪನ್ನಗಳನ್ನು ತೆಗೆಯುವಾಗ ಆಗುವ ನಷ್ಟ, ಏರುತ್ತಿರುವಜನಸಂಖ್ಯಾ, ಒತ್ತಡ, ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಔಷಧಿಮೂಲಿಕೆಗಳ ಬೇಡಿಕೆ, ಮೂಲಿಕೆಗಳ ಕಳ್ಳಸಾಗಣೆ-ಇವೆಲ್ಲ ಒದಲ್ಲಒಂದು ಬಗೆಯಲ್ಲಿಕಾಡಿನ ಔಷಧಮೂಲಿಕೆಗಳ ಸಂಪತ್ತಿನ ನಾಶಕ್ಕೆ ಕಾರಣವಾಗುತ್ತಿದೆ. ಹೀಗಾಗಿ ಇವನ್ನೆಲ್ಲ ಮೀರಿ ಅವುಗಲ ಸಂರಕ್ಷಣೆ ಸಾಧಿಸಬೇಕಿದೆ.ಅರಣ್ಯ ಸಂರಕ್ಷಣಾಕಾಯ್ದೆಯಜೊತೆಗೆಜೀವವೈವಿಧ್ಯ ಕಾನೂನಿನ ಅಂಶಗಳನ್ನು ಈ ನಿಟ್ಟಿನಲ್ಲಿ ಬಳಸಿಕೊಳ್ಳಬೇಕಾದ ಅಗತ್ಯವಿದೆ.ಈ ದೃಷ್ಟಿಯಿಂದ ಈ ಅಧ್ಯಯನದ ಮಾಹಿತಿಗಳನ್ನೂ ಆಧಾರವಾಗಿರಿಸಿಕೊಂಡು, ಮುಂದಿನ ಕಾರ್ಯಯೋಜನೆರೂಪಿಸಬಹುದಾಗಿದೆ.

## ಮುಂದಿನ ದಾರಿಗಳು:

ನಮ್ಮರಾಜ್ಯದಲ್ಲಿಈವರೆಗೆ ದಾಖಲಿಸಿರುವ ಸುಮಾರು 4800ಕ್ಕೂ ಹೆಚ್ಚಿನ ಹೂಬಿಡುವ ಸಸ್ಯಗಳ ಪ್ರಭೇಧಗಳ ಕುರಿತು ಈ ಅಧ್ಯಯನ ವರದಿಗಳಲ್ಲಿ ತುಂಬಾಉಪಯುಕ್ತ ಮಾಹಿತಿಗಳಿವೆ. ತಮ್ಮ ಮಾಹಿತಿಗಾಗಿಅದರಎರಡುರೀತಿಯ ಪ್ರಮುಖ ಮಾಹಿತಿಗಳನ್ನು ಉದಾಹರಣೆಗಾಗಿಇಲ್ಲಿ ನೀಡಿದ್ದೇನೆ.

**ಉದಾಹರಣೆಗೆ:ರಾಜ್ಯದಅರಣ್ಯ ವೃತ್ತಗಳಲ್ಲಿ ಸಾಮಾನ್ಯವಾಗಿಕಂಡುಬರುವ ಕೆಲವು ಔಷಧಿಗಿಡ–ಮರಗಳು ಈ ಕೆಳಗಿನಂತಿವೆ.:**

| ಕೆನರಾ ಸರ್ಕಲ್ | ಕಲ್ಬುರ್ಗಿ ಸರ್ಕಲ್ |
|---|---|
| ದಿಡಿಲು (Anogeissuslatifolia) .<br>ತಗ್ಗಿ (Clerodendruminfortunatum)<br>ನೆಲತೆಂಗು (Curculigoorchioides)<br>ಪುಳ್ಳಂಪರಚೆ (Desmodiumtriflorum.)<br>ಸೊಗದೆ ಬೇರು (Finlaysoniawallichii)<br>ಹಾಲುಬಳ್ಳಿ (Hemidesmusindicus)<br>ಕಾಳುಮೆಣಸು(Piper nigrum)<br>ಹೊನಗಲು (Terminaliapaniculata)<br>ಲಕ್ಕಿ (Vitexnegundo)<br>ಜಂಬೆ ಮರ (Xyliaxylocarpa) | ಚಿಗರೆ ಮರ (Albiziaamara)<br>ಕಿರಾತಕಡ್ಡಿ (Andrographispaniculata)<br>ತಂಗಡಿಗಿಡ (Cassia auriculata)<br>ಕಕ್ಕೆ ಮರ (Cassia fistula)<br>ತಗಚೆ ಗಿಡ (Cassia tora)<br>ಮಸಿಮರ (Chloroxylonswietenia)<br>ಬಂದಾರೆಗಿಡ (Dodonaea viscose)<br>ಮುಲಗ (Morindacoreia)<br>ಹೊಂಗೆಮರ (Pongamiapinnata) |
| **ಮಂಗಳೂರು ಸರ್ಕಲ್** | **ಮೈಸೂರು ಸರ್ಕಲ್** |
| ಕುಂಬಸಲುಬಳ್ಳಿ(Calycopteris floribunda)<br>ತಗ್ಗಿಗಿಡ (Clerodendruminfortunatum)<br>ಆನೆಕಾಲು ಗಿಡ (Elephantopusscaber)<br>ಹಾಲುಬಳ್ಳಿ (Hemidesmusindicus)<br>ಕೇಪಳ (Ixoracoccinea)<br>ನೆಲನೇರಳೆ (Naregamiaalata) | ಕಾಚು (Acacia catechu)<br>ದಿಂಡಿಗ (Anogeissuslatifolia)<br>ಹೆಗ್ಗರೆ (Catunaregamspinosa)<br>ನೆಲತೆಂಗು (Curculigoorchioides)<br>ದೇವರಾದ್ರು (Erythroxylummonogynum)<br>ವಿಷ್ಣುಕ್ರಾಂತಿ (Evolvulusalsinoides) |

| | |
|---|---|
| ಕಾಳುಮೆಣಸು (Piper nigrum)<br>ಸಾಗಡೆ ಮರ (Schleicheraoleosa)<br>ಹೊನಗಲು ಮರ<br>(Terminaliapaniculata)<br>ಜಂಬೆಮರ (Xyliaxylocarpa) | ಸಪಂಗ (Morindacitrifolia)<br>ಮುಲಗ (Morindacoreia)<br>ಹೊಂಗೆಮರ<br>(Pongamiapinnata)<br>ಶ್ರೀಗಂಧ (Santalum album) |
| <u>ಹಾಸನ ಸರ್ಕಲ್</u><br>ಕಾಚು (Acacia chundra)<br>ಚಿಗರೆಮರ (Albiziaamara)<br>ದಿಂಡಿಗ (Anogeissuslatifolia)<br>ತಂಗಡಿಗಿಡ (Cassia auriculata)<br>ಬಂದಾರೆಗಿಡ (Dodonaea viscose)<br>ದೇವದಾರು<br>(Erythroxylummonogynum)<br>ವಿಷ್ಣುಕ್ರಾಂತಿ<br>(Evolvulusalsinoides)<br>ಸುಗಂದಿಬಳ್ಳಿ<br>(Hemidesmusindicus)<br>ನೇರಳೇಮರ(Syzygiumcumini)<br>ಧೂಪ (Vateriaindica) | <u>ಧಾರವಾಡ ಸರ್ಕಲ್</u><br>ಕಾಚು (Acacia catechu)<br>ಚಿಗರೆ (Albiziaamara)<br>ದಿಂಡಿಗ (Anogeissuslatifolia) |

**<u>ರಾಜ್ಯದಲ್ಲಿಕಂಡುಬರುವ ಕೆಲವು ಪ್ರಮುಖ ವಿನಾಶದಂಚಿನ(IUCN RED LISTED)ಔಷಧಿಗಿಡ–ಮರಗಳು ಈ ಕೆಳಗಿನಂತಿವೆ.:</u>**

| <u>ಕೆನರಾ ಸರ್ಕಲ್</u> | <u>ಮಂಗಳೂರು ಸರ್ಕಲ್</u> |
|---|---|
| ಮಸಿಮರ (Chloroxylonswietenia )<br>ಲವಂಗ (Cinnamomumwightii )<br>ಹೈಗಾ (Hopeaponga )<br>ಸೂರಂಟೆ ( | ದಾಲ್ಚಿನ್ನಿ (Cinnamomumsulphuratum)<br>ಅಡವಿ ಲವಂಗ (Cinnamomumwightii)<br>ಕೈಮರ (Diospyrospaniculata)<br>ಕಾಡುಗಂಧ (Dysoxylummalabaricum)<br>ಕಾಡುರಾಮಪತ್ರೆ (Myristicadactyloides)<br>ಹೊನ್ನೆ (Pterocarpusindicus)<br>ಶ್ರೀಗಂಧ (Santalum album) |

| | |
|---|---|
| Hydnocarpuspentandrus)<br>ಬೆಟ್ಟದ ನೆಲ್ಲಿ<br>(Phyllanthusindofischeri )<br>ರಕ್ತಚಂದನ (Pterocarpussantalinus).<br>ಸೀತಾಅಶೋಕಾ (Saracaasoca)<br>ಕಾಡುನೇರಳೆ<br>(Syzygiumtravancoricum)<br>ಅಡವಿ ಅಣಲೆ ( Terminaliapallida )<br>ಧೂಪದ ಮರ (Vateriaindica) | ಜಾಲಾರಿ (Shorearoxburghii)<br>ತಂಬಾಗ (Shoreatumbuggaia)<br>ಅಡವಿ ಅಣಲೆ (Terminalia pallid) |
| ಕಲ್ಬುರ್ಗಿ ಸರ್ಕಲ್<br>ಬೀಟೆ (Dalbergialatifolia)<br>ರಕ್ತಚಂದನ (Pterocarpussantalinus)<br>ಅಡವಿ ಅಣಲೆ (Terminalia pallid) | ಧಾರವಾಡ ಸರ್ಕಲ್<br>ಬೀಟೆ (Dalbergialatifolia)<br>ಶ್ರೀಗಂಧ (Santalum album).<br>ಕಾಡು ನೇರಳೆ (Syzygiumalternifolium)<br>ಅಡವಿ ಅಣಲೆ (Terminalia pallid) |
| ಮೈಸೂರು ಸರ್ಕಲ್<br>ಬೀಟೆಮರ (Dalbergialatifolia).<br>ಬೆಟ್ಟದನೆಲ್ಲಿ(Phyllanthusindofischeri) | ಹಾಸನ ಸರ್ಕಲ್<br>ನುರಕಲು (Buchananialanceolata)<br>ಹೊಲೇಹೊನ್ನೆ (Calophyllumapetalum)<br>ಬೋವು (Hopearacophloea)<br>ಕಾಡು ರಾಮಪತ್ರೆ (Myristicadactyloides)<br>ಜಾಲಾರಿ (Shorearoxburghii)<br>ಕಾಡುನೇರಳೆ (Syzygiumtravancoricum) |

**ಈ ಮಾಹಿತಿಗಳು ನೀಡುವ ಒಳನೋಟಗಳ ಆಧಾರದಲ್ಲಿ, ರಾಜ್ಯಮಟ್ಟದ ಹಾಗೂ ಸರ್ಕಲ್ ಮಟ್ಟದ ವರದಿಗಳನ್ನು ರಚಿಸುವಕುರಿತುಕಾರ್ಯಕ್ರಮರೂಪಿಸಬೇಕಾಗಿದೆ.**

**ಈ ಹಿನ್ನೆಲೆಯಲ್ಲಿ ಈ ಕೆಳಗಿನ ಮಹತ್ವದ ಅಂಶಗಳನ್ನು ಮುಂದಿನ ಕಾರ್ಯಯೋಜನೆಗಳಲ್ಲಿ ಅಳವಡಿಸಿಕೊಳ್ಳಬೇಕು.**

1. **ಸರ್ಕಲ್ ಮಟ್ಟದ ಸಸ್ಯವೈವಿಧ್ಯ ಪರಿಸ್ಥಿತಿ ವರದಿ:** ಈಗಿರುವ ವಿಭಾಗವಾರು ಮಾಹಿತಿಯನ್ನು ಆಧರಿಸಿ, **"ಸರ್ಕಲ್ ಮಟ್ಟದ ಸಸ್ಯವೈವಿಧ್ಯ ಪರಿಸ್ಥಿತಿ ವರದಿ"( Circle wise Status Report) ರೂಪಿಸಬೇಕು. ಇದರಲ್ಲಿ ಈ ಕೆಳಗಿನ ಪ್ರಮುಖ ಅಂಶಗಳಿರಬೇಕು.**

- ಜಿಲ್ಲೆಯಲ್ಲಿ ವ್ಯಾಪಕವಾಗಿರುವಅತಿ ಪ್ರಮುಖ ಸಸ್ಯವೈವಿಧ್ಯಯಾದಿ (ಅರಣ್ಯ ವಿಭಾಗ/ವಲಯ ವಾರು ವಿವರ, ಗಿಡಮರಗಳ ಕನ್ನಡ ಹೆಸರಿನೊಂದಿಗೆ).
- ಸರ್ಕಲ್ ಹಾಗೂ ಜಿಲ್ಲೆಯಲ್ಲಿಕಡಿಮೆಯಾಗುತ್ತಿರುವ ಪ್ರಮುಖ ಸಸ್ಯಗಳ ಪ್ರಬೇಧಗಳು ಮತ್ತು ಕಾರಣಗಳು (ಅರಣ್ಯ ವಿಭಾಗ/ವಲಯ ವಾರು ವಿವರ, ಗಿಡಮರಗಳ ಕನ್ನಡ ಹೆಸರಿನೊಂದಿಗೆ).
- ಅರಣ್ಯ ಇಲಾಖೆ ಹಾಗೂ ಉಳಿದ ಸರ್ಕಾರಿ ಇಲಾಖೆಗಳು (ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್, ಇತ್ಯಾದಿ) ತಮ್ಮ ಸಂರಕ್ಷಣಾಯೋಜನೆಯಲ್ಲಿ ಕೈಗೊತ್ತಿಕೊಳ್ಳಬಹುದಾದ ಸಸ್ಯ ಪ್ರಬೇಧಗಳು (ಅರಣ್ಯ ವಿಭಾಗ/ ವಲಯ ವಾರು ವಿವರ, ಗಿಡಮರಗಳ ಕನ್ನಡ ಹೆಸರಿನೊಂದಿಗೆ).
- ಸಂರಕ್ಷಣೆಆದ್ಯತೆ ನೀಡಬೇಕಾದ ವನ್ಯಸಸ್ಯಪ್ರಬೇಧಗಳಿರುವ ಪ್ರದೇಶಗಳ ವಿವರ (ಕಾಡು, ನದಿ, ತಪ್ಪಲು, ಹುಲ್ಲುಗಾವಲು, ಶೋಲಾ, ಇತ್ಯಾದಿ (ಅರಣ್ಯ ವಿಭಾಗ/ ವಲಯ ವಾರು ವಿವರ).

2. **ರಾಜ್ಯ ಮಟ್ಟದ ಸಂಕ್ಷಿಪ್ತ ವರದಿ:**ಒಮ್ಮೆಎಲ್ಲ ಸರ್ಕಲ್ ಮಟ್ಟದ ವರದಿಗಳು ರೂಪಿತವಾದ ಮೇಲೆ, ಅವುಗಳ ಆಧಾರದಲ್ಲಿ, **"ಕರ್ನಾಟಕ ಸಸ್ಯವೈವಿಧ್ಯ ಪರಿಸ್ಥಿತಿ ವರದಿ"** ("State Level Status Report") ಪ್ರಕಟಿಸಬೇಕು. ಈ ವರದಿಯು ಸರಳವೂ, ಸಂಕ್ಷಿಪ್ತವೂಆಗಿದ್ದು, ಮಾಹಿತಿ ಪೂರ್ಣವಾಗಿರಬೇಕು.ಆಗ, ಅದು ಸರ್ಕಾರದಉನ್ನತಮಟ್ಟದಲ್ಲಿಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಜೊತೆಯಾಗಿ, ಸಸ್ಯಸಂರಕ್ಷಣೆ ಭವಿಷ್ಯದ ನೀತಿರೂಪಿಸಲು ಮತ್ತು ಅವುಗಳನ್ನು ಅನುಷ್ಠಾನಗೊಳಿಸಲು ಸಹಕಾರಿಯಾಗುತ್ತದೆ.

3. **ಅರಣ್ಯಇಲಾಖೆಯ ವಿವಿಧ ಸಂರಕ್ಷಣಾ ಯೋಜನೆಗಳಲ್ಲಿ ಈ ಮಾಹಿತಿಗಳನ್ನು ಬಳಸುವ ಸಾಧ್ಯತೆಗಳು:**

A. **ವರ್ಕಿಂಗ್–ಪ್ಲಾನ್‌ನಲ್ಲಿಆಧ್ಯತೆ(Working Plan)**:ಅರಣ್ಯ ವಿಭಾಗವಾರು ಔಷಧಿಮೂಲಿಕೆಗಳ ಸಂರಕ್ಷಣೆ ಮತ್ತು ಸಂವರ್ಧನೆಕುರಿತು ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು Working Planನಲ್ಲಿ ಅಳವಡಿಸಬೇಕು. ಮುಂಬರುವWorking Planಪುನರ್ ಪರಿಶಿಲನೆ ಸಂದರ್ಭದಲ್ಲಿಇದಕ್ಕೆಆಧ್ಯತೆ ನೀಡಬೇಕು.

B. **ಕಿರು–ಅರಣ್ಯಉತ್ಪತ್ತಿ ಹರಾಜು ಪ್ರಕ್ರಿಯೆ(NTFP Auctioning Principles)**:ಅರಣ್ಯ ವಲಯಗಳಲ್ಲಿ ಉಪಅರಣ್ಯ ಉತ್ಪನ್ನಗಳನ್ನು ಹರಾಜು ಹಾಕುವಾಗ ಔಷಧಿಮೂಲಿಕೆಗಳು ನಾಶವಾಗದಂತೆಎಚ್ಚರವಹಿಸಬೇಕಿದೆ. ದಾಲ್ಚಿನ್ನಿ, ಕೋಕಂ, ಉಪ್ಪಾಗೆ, ರಾಮಪತ್ರೆಅಂತಹ ಅನೇಕ ಅಮೂಲ್ಯ ಪ್ರಬೇಧಗಳನ್ನು ಈ ಪ್ರಕ್ರಿಯೆಯಿಂದ ಹೊರಗಿಡಬೇಕಾದಅಗತ್ಯವಿದೆ. ಹರಾಜು ಹಾಕಬಹುದಾದ ಪ್ರಬೇಧಗಳಿಗೂ ಹೆಚ್ಚಿನ ಮೌಲ್ಯ ನಿರ್ಧರಿಸುವಅವಶ್ಯಕತೆಯೂಇದೆ. ಈ ಕುರಿತುಅರಣ್ಯಇಲಾಖೆಯ ಮಟ್ಟದಲ್ಲಿ ವಿವರವಾದಉನ್ನತಮಟ್ಟದ ಪ್ರತ್ಯೇಕ ಸಮಾಲೋಚನೆ ಸಭೆ ನಡೆಯಬೇಕು

C. **ಕಿರು–ಅರಣ್ಯ ಉತ್ಪತ್ತಿಗಳ ಸುಸ್ಥಿರ ಕೊಯಿಲು (Principles of Sustainable Harvesting of NTFP)**:ಅರಣ್ಯ ವಲಯಗಳಲ್ಲಿ ಕಿರು–ಅರಣ್ಯ ಉತ್ಪನ್ನಗಳನ್ನು ಹರಾಜು ಹಾಕುವಾಗ ಔಷಧಿಮೂಲಿಕೆಗಳು ನಾಶವಾಗದಂತೆಎಚ್ಚರವಹಿಸಬೇಕಿದೆ. ಅವುಗಳನ್ನು ಕೊಯಿಲುಮಾಡುವಾಗ ಸುಸ್ಥಿರಕೊಯಿಲು ಸೂತ್ರಗಳನ್ನು ಅಳವಡಿಸಿಕೊಳ್ಳುವುದರ ಕುರಿತು ವಿಶೇಷ ಮಾರ್ಗಸೂಚಿ ರಚಿಸಿ, ಅವು ತಳಮಟ್ಟದಲ್ಲಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕಿದೆ.

D. **ಮೂಲಿಕೆಗಳ ನೈಸರ್ಗಿಕ ತಾಣಗಳ ಸಂರಕ್ಷಣೆ(*In-situ* conservation)**:ರಾಜ್ಯದಕಾಡಿನ ಪ್ರದೇಶದಲ್ಲಿರುವ ನೈಸರ್ಗಿಕ ಔಷಧಿಮೂಲಿಕೆಗಳನ್ನು ಸಂರಕ್ಷಿತ ಪ್ರದೇಶ(MPCA),ಪಾರಂಪರಿಕ ಪ್ರದೇಶ(Heritage Sties)ನದಿಮೂಲಗಳು ಹಾಗೂ ನದಿ ಕಣಿವೆಗಳೂ (Riparian belt)ಇತ್ಯಾದಿ ನಿರ್ವಹಣೆಯಲ್ಲಿ ಸೂಕ್ತವಾದ ಹಾಗೂ ನಿರಂತರವಾದ ಕಾರ್ಯಯೋಜನೆಗಳು ರೂಪಿತಗೊಳ್ಳಬೇಕು.

**4.ಸಂವರ್ಧನೆ(*Ex-situ* Conservation):**ರಾಜ್ಯದಲ್ಲಿಂದು ಅನೇಕ ಬಗೆಯಸಸ್ಯಗಳನ್ನು ಔಷಧಿಗಾಗಿಅಪಾರ ಪ್ರಮಾಣದಲ್ಲಿ ಬಳಸಲಾಗುತ್ತಿದೆ. ನಮ್ಮ ಮಂಡಳಿಯ ಅಂಕಿಅಂಶದಆಧಾರದಲ್ಲಿಅಂತ ಕೆಲವು ಮುಖ್ಯ ಔಷಧಿಮೂಲಿಕೆಗಳೆಂದರೆ: ಸಾಂಬ್ರಾಣಿ (Coleus forskohlii), ನೆಲ್ಲಿ (Phyllanthusemblica), ತುಳಸಿ (Ocimumtenuiflorum), ಅರಿಶಿಣ (Curcuma longa), ದೊಡ್ಡಹಾಲೆ (Citrulluscolocynthis), ಶತಾವರಿ (Asparagus racemosu),ಗೋಕ್ಷರು (Tribulusterrestris), ಅಸ್ತಿಶೃಂಕಲ (Cissusquadrangularis), ಲೋಳೆರಸ (Aloe barbadensis), ಒಂದೆಲಗ (Centellaasiatica), ಹೊನ್ನೆ (Pterocarpusmarsupium), ಕಹಿಬೇವು (AzadirachtaIndica) ಇತ್ಯಾದಿ ಇವನ್ನೆಲ್ಲಜನಸಹಭಾಗಿತ್ವದೊಂದಿಗೆಅಪ್ಪಟಕಾಡಿನ ಪ್ರದೇಶದ ಹೊರಗೂ ಬೆಳೆಸಲು ಸಾಧ್ಯವಿದೆ, ಕೃಷಿಭೂಮಿ, ಸಾರ್ವಜನಿಕ ಹಾಗೂ ಸಾಮೂಹಿಕ ಭೂಮಿಗಳಲ್ಲಿ (ಗೋಮಾಳ, ಕೆರೆಯಂಚು, ಕಾನು, ಇನಾಂ ಭೂಮಿ, ಬೆಟ್ಟ, ಹಾಡಿ, ಕುಮ್ಕಿ ಇತ್ಯಾದಿ) ಹಾಗೂ ಸಾಮಾಜಿಕಅರಣ್ಯ ಯೋಜನೆಗಳ (Social Forestry)ಔಷಧಿಗಿಡ ಬೆಳೆಸುವ ಯೋಜನೆಗಳು ರೂಪುಗೊಳ್ಳಬೇಕು. ಇದರಿಂದಾಗಿ ಸಮುದಾಯಗಳಿಗೆ ಹೊಸ ಆರ್ಥಿಕಚಟುವಟಿಕೆಯೂದೊರಕಿದಂತಾಗುತ್ತದೆ. ಹಾಗೂ ಉದ್ಯಮಗಳಿಗೆ ಗುಣಮಟ್ಟದ ಮೂಲಿಕೆಗಳು ಸಕಾಲದಲ್ಲಿದೊರಕಲೂ ಸಹಾಯವಾಗುತ್ತದೆ. ನರ್ಸರಿ(Nursery)ಹಾಗೂ ವಿವಿಧ ಬಗೆಯ ಉದ್ಯಾನವನಗಳ (ಪವಿತ್ರವನ, ಶಾಲಾವನ, ಸಸ್ಯೋದ್ಯಾನ, ಆರ್ಬೋರೇಟಂಇತ್ಯಾದಿ) ಸಾರ್ವಜನಿಕರಿಗೆ ಅವುಗಳ ಕುರಿತು ಮಾಹಿತಿ, ನಾಟಿಮಾಡಲು ಗಿಡಗಳು ದೊರೆಯುವಂತೆ ಆಗಬೇಕು.ಈ ಕುರಿತುಈಗಿರುವವಿವಿಧ ಯೋಜನೆಗಳಲ್ಲಿ ಈ ಅಂಶವನ್ನು ವೈಜ್ಞಾನಿಕವಾಗಿ ಅಳವಡಿಸುವ ಪ್ರಯತ್ನವಾಗಬೇಕು.ಔಷಧಿಮೂಲಿಕೆಗಳನ್ನು ಸುಸ್ಥಿರವಾಗಿ ಬಳಸುವ ಈಬಗೆಯ ದೀರ್ಘಕಾಲಿನ ಯೋಜನೆಗಳು ರೂಪುಗೊಳ್ಳಬೇಕಾಗಿದೆ.

**5. ಔಷಧಿಮೂಲಿಕೆಗಳನ್ನು ಬಳಸುವ ಉದ್ಯಮಗಳ ಸಹಭಾಗಿತ್ವ :**ಜೀವವೈವಿಧ್ಯ ಕಾನೂನಿನ ಅನ್ವಯ, **ಲಾಭಾಂಶ ವಿತರಣೆ**(ABS component)ತತ್ವದಡಿ, ಕಾಡಿನ ಮೂಲದ ಹಾಗೂ ಕೃಷಿಮೂಲದ ಔಷಧಿಮೂಲಿಕೆಗಳನ್ನು ವಾಣಿಜ್ಯಕವಾಗಿ ಬಳಸುವ ಹಲವು ಬಗೆಯ ಉದ್ದಿಮೆಗಳಿವೆ. (ಉದಾಹರಣೆಗೆ: ನಮ್ಮ ಮಂಡಳಿಯ ಸದ್ದದಅಂಕಿಅಂಶದ ಪ್ರಕಾರ, ವಿವಿಧಔಷಧಿಉತ್ಪನ್ನತಯಾರಿಸುವ ಉದ್ಯಮಗಳು (350), ಕೃಷಿ ಉತ್ಪನ್ನಆಧಾರಿತ ಉದ್ಯಮಗಳು (6), ಜೈವಿಕತಂತ್ರಜ್ಞಾನ ಉದ್ಯಮಗಳು (10)–ಇವೆಲ್ಲಅಂಥ ವಾಣಿಜ್ಯಕ ಬಳಕೆದಾರರು, ಇನ್ನೂ ನೋಮದಣಿಯಾಗಬೇಕಾದ ಹಲವಾಉ ಉದ್ಯಮಗಳು ಇರುವದೂ ಸತ್ಯದ ಸಂಗತಿ). ಮೂಲಿಕಾ ಸಂರಕ್ಷಣೆಯಲ್ಲಿಇವರೆಲ್ಲ ತೊಡಗಿಕೊಳ್ಳಬೇಕಾದ ಸಾಂವಿಧಾಕಜವಬ್ದಾರಿಯಿದೆ. ಹೀಗಾಗಿ ಈ ನಿಟ್ಟಿನಲ್ಲಿ ಖಾಸಗಿ ವಲಯವನ್ನು ಪರಿಣಾಮಕಾರಿಯಾಗಿತೊಡಗಿಸುವ ಮುಕ್ತಮನಸ್ಸಿನ ಚಿಂತನೆಯಾಗಬೇಕು ಮತ್ತು ನವೀನ ಸಂವರ್ಧನಾ ಯೋಜನೆಗಳು ರೂಪುಗೊಳ್ಳಬೇಕು.

**6. ಸರ್ಕಾರದ ವಿವಿಧ ಇಲಾಖೆಗಳ ಯೋಜನೆಯಲ್ಲಿ ಸಮನ್ವಯ ಸಾಧಿಸುವ ಮತ್ತು ಸ್ಪಷ್ಟಉದ್ದೇಶ ನಿಗದಿಪಡಿಸುವುದು:** ಔಷಧಿಮೂಲಿಕೆಗಳನ್ನು ವ್ಯಾಪಕವಾಗಿ ಬೆಳೆಸುವ ಕುರಿತಂತೆ ಈಗಾಗಲೇ ಆಯುಶ್ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆಗಳ ಅಡಿಯಲ್ಲಿ ಹಲವು ಉಪಯುಕ್ತ ಯೋಜನೆಗಳು ಜಾರಿಯಲ್ಲಿವೆ. ನಮ್ಮ ಮಂಡಳಿಯು ನಡೆಸಿದ ಈ ಅಧ್ಯಯನದ ಮಾಹಿತಿಗಳ ಉಪಯೋಗ ಆ ಎಲ್ಲ ಸಂರಕ್ಷಣೆ/ಸಂವರ್ಧನೆ ಯೋಜನೆಗಳನ್ನು ರೂಪಿಸುವಲ್ಲೂ ಬಳಕೆಯಾಗಬೇಕು. ಈ ದೃಷ್ಟಿಯಿಂದ ಆ ಎಲ್ಲ ಯೋಜನೆಗಳಲ್ಲಿ ಸಮನ್ವಯತೆ ಸಾಧಿಸುವಕುರಿತುಚಿಂತನೆಯಾಗಬೇಕಿದೆ.

**7. ವಿನಾಶದಅಂಚಿನಲ್ಲಿರುವಅಮೂಲ್ಯ ಸಸ್ಯಪ್ರಭೇಧಗಳ ಸಂರಕ್ಷಣೆಕುರಿತು ವಿಶೇಷ ಕಾರ್ಯಕ್ರಮಗಳು:**ವಿನಾಶದಅಂಚಿನಲ್ಲಿರುವ ಹಲವು ಸಸ್ಯಗಳನ್ನು ಇಂದುಕಾಡಿನಿಂದತೆಗೆದು ಬಳಸಲಾಗುತ್ತಿದೆ. ಉದಾಹರಣೆಗೆ: ಸಿತಾಅಶೋಕ, ಮರದರಶಿನ. ರಾಮಪತ್ರೆ, ಹೊಳೆಮತ್ತಿ (ಅರ್ಜುನ/(Terminaliaarjuna),ಏನಾಯಕ(Salaciaoblonga), ತೊಟ್ಟಿಲುಕಾಯಿ (Aphanamixispolystachya), ಬಿಲ್ವ(Aeglemarmelos), ಕೋಕಂ(GarciniaIndica), ಉಪ್ಪಾಗೆ(Garciniagummi-gutta), ಧಾತಕಿ(Wood fordiafruticosa), ಬಿಕ್ಕೆ (Gardenia gummifera) ಇತ್ಯಾದಿ.ಪ್ರತಿಅರಣ್ಯವೃತ್ತ ಹಾಗೂ ವಿಭಾಗಗಳ ಮಟ್ಟದಲ್ಲೂಜಾಗತಿಕ ಮಹತ್ವದ ಈ ಬಗೆಯವಿನಾಶದಅಂಚಿನಲ್ಲಿರುವಅಮೂಲ್ಯ ಸಸ್ಯಪ್ರಭೇಧಗಳ ಸಂರಕ್ಷಣೆ ಹಾಗೂ ಸಂವರ್ಧನೆಕುರಿತು ವಿಶೇಷ ಕಾರ್ಯಕ್ರಮಗಳು ರೂಪುಗೊಳ್ಳಬೇಕು. ಈ ಪ್ರಯತ್ನದಲ್ಲಿ

ಸ್ಥಳೀಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು, ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳು ಹಾಗೂ ತಜ್ಞರ ಸಹಕಾರ ಪಡೆಯುವ ಮಾರ್ಗದರ್ಶಿ ಸೂತ್ರರಚಿಸಬೇಕಿದೆ.

**8. ಸ್ಥಳೀಯ ಸಮುದಾಯಗಳ ಒಳಗೊಳ್ಳುವಿಕೆ:** ಔಷಧಿ ಮೂಲಿಕೆಗಳ ಸಂರಕ್ಷಣೆ, ಸಂವರ್ಧನೆ ಹಾಗೂ ಸುಸ್ಥಿರ ಬಳಕೆ– ಈ ಮೂರು ನಿಟ್ಟಿನಲ್ಲಿಸರ್ಕಾರಿಯೋಜನೆಗಳು ಯಶಸ್ಸುಕಾಣಬೇಕಾದರೆ, ಅಂತಿಮವಾಗಿಜನಸಹಭಾಗಿತ್ವವೆ ಮುಖ್ಯ.ಈ ನಿಟ್ಟಿನಲ್ಲಿರೈತರು, ಬಿ.ಎಂ.ಸಿ, ಗ್ರಾಮಅರಣ್ಯ ಸಮಿತಿಗಳು, ರೈತ ಸಹಕಾರಿ ಸಂಘಗಳು, ರೈತಉತ್ಪಾದನಾ ಕಂಪನಿಗಳು, ಸಸ್ಯಶಾಸ್ತ್ರಜ್ಞರು, ವೈದ್ಯರು, ಶಿಕ್ಷಕರು, ವಿದ್ಯಾರ್ಥಿಗಳು, ನಾಟಿವೈದ್ಯರು, ಸ್ಥಳೀಯ ಜನಪದತಜ್ಞರು, ಪಾರಂಪರಿಕ ಕುಶಲಕರ್ಮಿಗಳು–ಹೀಗೆ ಸಮುದಾಯದಎಲ್ಲರ ಸಹಭಾಗಿತ್ವವುನಮ್ಮ ಯೋಜನೆಗಳಲ್ಲಿ ಇರುವಂತಾಗಬೇಕು.ಅದನ್ನು ಸಾಧಿಸುವ ಬಗೆಯೂಕುರಿತುತಾವೆಲ್ಲ ಸಲಹೆ ನೀಡಬೇಕು.

ಈ ಎಲ್ಲ ವಿಷಯಗಳ ಕುರಿತು ವಿವರವಾದ ಮುಕ್ತ ಚಿಂತನೆ ನಡೆದು, ರಾಜ್ಯದಔಷಧಿ ಮೂಲಿಕೆಗಳ ಸಂರಕ್ಷಣೆಗೆಚುರುಕು ನೀಡುವ ಪರಿಣಾಮಕಾರಿ ಕಾರ್ಯಯೋಜನೆಗಳು ಬರುವ ದಿನಗಳಲ್ಲಿ ರೂಪುಗೊಳ್ಳಲಿ ಎಂದು ಈ ಮೂಲಕ ಹಾರೈಸುತ್ತೇನೆ.

ಬನ್ನಿ ಸಸ್ಯಶ್ಯಾಮಲೆಗೆ ಸಂರಕ್ಷಣೆಯ ಕವಚ ತೊಡಿಸೋಣ, ಹಸಿರು ಆಂದೋಲನಕ್ಕೆ ಬೇಕಾದ ಹಸಿರಿನ ಉಳಿವಿಗೆ ಕಂಕಣಬದ್ಧರಾಗೋಣ. ಸಸ್ಯಶ್ಲಾಮಲಾಂ ವಂದೇ ಮಾತರಂ.